ಕಳಿಸಿಕೊಡೋಣ. ಸನ್ಮಾನ್ಯ ಈಶ್ವರಪ್ಪನವರು ಮತ್ತೂ ವಿಶೇಷವಾಗಿ ರಕ್ತದಾನವನ್ನು ಮಾಡುವ ಬಗ್ಗೆ ಮಾತನಾಡಿದ್ದಾರೆ. ಅದರ ಬಗ್ಗೆ ಅಲ್ಲಿನ ಸರ್ಕಾರದೊಂದಿಗೆ ಮಾತನಾಡಿ ಅದರ ಅವಶ್ಯಕತೆ ಇದೆಯೇ ಎಂದು ಕೇಳಿ ತಿಳಿದುಕೊಳ್ಳುತ್ತೇನೆ. ನಮ್ಮ ರಾಜ್ಯದ ಜನ ಯುವಕರು ತಮ್ಮಲ್ಲಿರುವ ರಕ್ತವನ್ನು ರಾಷ್ಟ್ರಕ್ಕಾಗಿ ಕೊಡಲು ಸದಾ ಸಿದ್ಧರಾಗಿದ್ದಾರೆ.

ನಮ್ಮ ಶಾಸಕರಾಗಲಿ, ಯುವಕರಾಗಲಿ ರಕ್ತದಾನ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಇದರ ಬಗ್ಗೆ ಕೂಡಲೇ ಅವರನ್ನು ಸಂಪರ್ಕಿಸಿ ಮಾತನಾಡುತ್ತೇನೆ. ತಾವು ಒಪ್ಪುವುದಾದರೆ ಇಲ್ಲಿ ಒಂದು ನಿರ್ಣಯವನ್ನು ಮಾಡೋಣ. ಈಗ ಈ ನಿರ್ಣಯವನ್ನು ನಾನು ಓದಿ ಹೇಳುತ್ತೇನೆ.

ನಿರ್ಣಯ

"ಮುಂಬಯಿಯಲ್ಲಿ ಇತ್ತೀಚೆಗೆ ನಡೆದ ಘೋರ ಹಿಂಸಾಕೃತ್ಯದಿಂದ ಇಡೀ ಭಾರತ ತಲ್ಲಣಗೊಂಡಿದೆ. ಈ ಅಕೃತ್ಯದಿಂದ ಸಾವು ನೋವಿಗೆ ಈಡಾದ ಜನರಿಗೆ ಅತ್ಯಂತ ಕಳಕಳಿಯ ಸಾಂತ್ವನವನ್ನು ಈ ಸಭೆಯು ಸೂಚಿಸುತ್ತದೆ. ಇಂಥ ಭಯಾನಕ, ಭಯೋತ್ಪಾದಕ ಕೃತ್ಯವನ್ನು ಈ ಸಭೆ ತೀವ್ರವಾಗಿ ಖಂಡಿಸುತ್ತದೆ. ಅಲ್ಲದೆ ಮಹಾರಾಷ್ಟ್ರ ಸರ್ಕಾರಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಕರ್ನಾಟಕ ರಾಜ್ಯದ ಜನತೆ ಅವಶ್ಯಕವಾದ ಸಹಾಯವನ್ನು ನೀಡುವುದಾಗಿ ಸಭೆ ತೀರ್ಮಾನಿಸುತ್ತದೆ. ಇಂಥ ದುಷ್ಕೃತ್ಯಕ್ಕೆ ಕಾರಣವಾದ ಶಕ್ತಿ, ವ್ಯಕ್ತಿಗಳನ್ನು ಕಂಡುಹಿಡಿದು ಇಂಥ ಘಟನೆಗಳು ಈ ದೇಶದಲ್ಲಿ ಮುಂದೆ ಬಾರದಂತೆ ಹತ್ತಿಕ್ಕುವ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಲು ಮಾನ್ಯ ಪ್ರಧಾನಮಂತ್ರಿಯವರಾದ ಶ್ರೀ ಪಿ.ವಿ. ನರಸಿಂಹರಾಯರಿಗೆ ಸಕಲ ನೆರವನ್ನೂ, ಬೆಂಬಲವನ್ನೂ ಈ ಸಭೆಯು ನೀಡಲು ತೀರ್ಮಾನಿಸುತ್ತದೆ. ಈ ನಿರ್ಣಯವನ್ನು ಈ ಸಭೆ ಒಕ್ಕೊರಲಿನಿಂದ ತೀರ್ಮಾನಿಸುತ್ತದೆ".

ಕರ್ನಾಟಕ ಸರ್ಕಾರದ ಪರವಾಗಿ ಹೇಳುವುದಾದರೆ, ಇಂಥ ದುಷ್ಟ ಶಕ್ತಿಗಳನ್ನು ಅಥವಾ ಇದಕ್ಕೆ ಪ್ರಚೋದನೆ ಮಾಡತಕ್ಕ ಅಥವಾ ದುಷ್ಕೃತ್ಯಕ್ಕೆ ಮನಸ್ಸು ಮಾಡತಕ್ಕ ಎಲ್ಲ ಶಕ್ತಿಗಳನ್ನೂ ನಾವು ಗುರುತಿಸಿ ಹತ್ತಿಕ್ಕುತ್ತೇವೆ ಎನ್ನತಕ್ಕ ಮಾತನ್ನು ಈ ಸದನದ ಪರವಾಗಿ ರಾಷ್ಟ್ರದ ರಾಜ್ಯದ ಜನತೆಗೆ ಹೇಳಿ, ಸದ್ಭಾವನೆಗಳನ್ನು ವ್ಯಕ್ತಪಡಿಸಿದ ಮಾನ್ಯ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನಾವು ಇದನ್ನು ಅನುಮೋದಿಸುತ್ತೇವೆ.

2. ಮೈಸೂರು ನಗರದಲ್ಲಿ ಭೀಕರ ಕಾಲರಾ ರೋಗ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮೈಸೂರು ನಗರದಲ್ಲಿ ಕಾಲರಾ ರೋಗ ಭೀಕರವಾಗಿ, ತೀವ್ರವಾಗಿ ಹರಡುತ್ತಿದೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಮೈಸೂರು ನಗರಕ್ಕೆ ಬಂದಿದ್ದರು. ಕೆಲವು ಆಸ್ಪತ್ರೆಗಳಿಗೆ ಭೇಟಿ ಮಾಡಿದ್ದಾರೆ. ಮುಂದೆ ಈ ಕಾಲರಾ ಬೇರೆ ಕಡೆಗೆ ಹರಡದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಅಲ್ಲಿನ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟು ಬಂದಿದ್ದಾರೆ. ಕಳೆದ ಒಂದೂವರೆ ತಿಂಗಳಿಂದ ಈ ರೋಗ ಹರಡುತ್ತಾ ಬಂದಿದೆ. ನಾನೂ ಕೂಡ ನಿನ್ನೆ ಆಸ್ಪತ್ರೆಗೆ ಭೇಟಿ ಮಾಡಿದ್ದೆ. ನಿನ್ನೆ 5 ಗಂಟೆಗೆ ತಾವೂ ಹೋಗಿದ್ದಿರಿ. ತಾವು ಬರುತ್ತೀರೆಂದು ಆಸ್ಪತ್ರೆಯ ಆವರಣದಲ್ಲಿ ಮಣ್ಣು ಬೂದಿ ಮುಂತಾದ್ದನ್ನೆಲ್ಲಾ ಹಾಕಿ ಸ್ವಲ್ಪ ಸ್ವಚ್ಛವಾಗಿ ಇಟ್ಟಿದ್ದರು. ಆ ಆಸ್ಪತ್ರೆ ಇರತಕ್ಕ ಸ್ಥಿತಿಯನ್ನು ನೋಡಿದರೆ, ಆ ಪರಿಸರವನ್ನು ನೋಡಿದರೆ ನರಕದಂತೆ ಕಾಣಿಸುತ್ತದೆ. ಇದು ಕೇವಲ ಮೈಸೂರು ಒಂದೇ ಅಲ್ಲ; ಮೈಸೂರಿನ ಸುತ್ತಮುತ್ತ ಈ ರೋಗ ಹಬ್ಬತಕ್ಕ ವಾತಾವರಣ ಇದೆ. ಈಗಾಗಲೇ

ನೂರಾರು ಜನರು ಔಷಧಿಗಳನ್ನು ತೆಗೆದುಕೊಳ್ಳಲಿಕ್ಕೆ ಬರುತ್ತಿದ್ದಾರೆ. ಈ ಕಾಲರಾ ನಿರೋಧ ಚುಚ್ಚು ಮದ್ದು ನಿಷ್ಪ್ರಯೋಜನವಾಗಿದೆ ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ಸಿಕ್ಕುತ್ತಿಲ್ಲವೆಂದು ಕೇಳಿಬರುತ್ತಿದೆ. ಆದ್ದರಿಂದ ಇಡೀ ಜಿಲ್ಲೆಯೇ ಈ ಕಾಲರಾ ರೋಗಕ್ಕೆ ತುತ್ತಾಗತಕ್ಕ ಪರಿಸ್ಥಿತಿ ಇದೆ. ಇದು ಬೇರೆ ಕಡೆ ಹರಡದಂತೆ ನೋಡಿಕೊಳ್ಳಬೇಕಾದರೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ತಿಳಿಸಬೇಕು. ಅಲ್ಲಿ ಸತ್ತಿರತಕ್ಕ ಅನೇಕ ಜನರು ದುರ್ದೈವದಿಂದ ಸತ್ತಿರುವವರು. ಸತ್ತವರ ಕುಟುಂಬದವರಿಗೆ ನೀವು ಪರಿಹಾರವನ್ನೇನಾದರೂ ಕೊಡುವುದಕ್ಕೆ ಸಾಧ್ಯವೆ? 'ನಗರಸಭೆ ಮತ್ತು ಜಲಮಂಡಲಿಯವರು ಸರಿಯಾಗಿ ಜವಾಬ್ದಾರಿಯುತವಾಗಿ ಕೆಲಸ ಮಾಡದೇ ಇರುವುದರಿಂದ ಇಷ್ಟೊಂದು ಜನ ಸಾವನ್ನಪ್ಪಿರುವುದರಿಂದ ಸತ್ತವರ ಕುಟುಂಬದವರಿಗೆ ಪರಿಹಾರವನ್ನು ಸರ್ಕಾರದಿಂದ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಅಲ್ಲಿಗೆ ಬಂದಿದ್ದಕ್ಕೂ, ತಾವು ಅಲ್ಲಿಗೆ ಬಂದಿದ್ದಕ್ಕೂ ಸ್ವಲ್ಪ ಕಾಲ ವ್ಯತ್ಯಾಸವಾಗಿದೆ. ಪರಿಹಾರವನ್ನು ಕೊಡುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ದಯವಿಟ್ಟು ಹೇಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಭೈರೇಗೌಡ:– ಮಾನ್ಯ ಅಧ್ಯಕ್ಷರೇ, ಇದಕ್ಕೆ ಮೂಲವಾಗಿರತಕ್ಕಂಥದ್ದು ಅಂದರೆ, ನಾನು ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಲಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ ಅಲ್ಲಿರತಕ್ಕಂತಹ ಒಳಚರಂಡಿ ವ್ಯವಸ್ಥೆ ಇದೆಯಲ್ಲಾ ಅದು ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಆಗಿರತಕ್ಕಂಥದ್ದು. ಮೈಸೂರು ನಗರ ಆವತ್ತಿಗೂ ಇವತ್ತಿಗೂ ಸುಮಾರು10ಪಟ್ಟು ಬೆಳೆದಿದೆ. ಇಲ್ಲಿಯವರೆಗೂ ಕೂಡ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡಿಲ್ಲ. ಮೈಸೂರು ನಗರದಲ್ಲಿ ಈ ರೀತಿಯಾದಂಥ ವಾಂತಿಭೇದಿಯಾಗುತ್ತಿರತಕ್ಕಂಥದ್ದು ಪ್ರಥಮವಲ್ಲ. ಇದು ರೆಗ್ಯುಲರ್ ಫೀಚರ್ ಆಗಿರತಕ್ಕಂಥದ್ದು. ನಾನು ಇದ್ದಂಥ ಸಂದರ್ಭದಲ್ಲಿ ಸಹ ಆಗಿಂದಾಗ್ಗೆ ಇದು ಮರುಕಳಿಸುತ್ತಿತ್ತು. ಅಲ್ಲಿಂದ ಇಲ್ಲಿಯವರೆಗೆ ಏನೂ ಕೆಲಸವಾಗಿಲ್ಲ. ಆದ್ದರಿಂದ ದಯವಿಟ್ಟು ಅಲ್ಲಿಗೆ ಒಂದು ಶಾಶ್ವತವಾದಂಥದ್ದು ಏನಾದರೂ ತಾವು ಆಲೋಚನೆ ಮಾಡಬೇಕೆಂದಿದ್ದರೆ, ಮೈಸೂರು ನಗರವನ್ನು ವಾಂತಿಭೇದಿ, ಕಾಲರಾದಿಂದ ಮುಕ್ತವನ್ನಾಗಿ ಮಾಡಬೇಕೆಂದಿದ್ದರೆ ನೀವು ದಯವಿಟ್ಟು ಈ ಒಳಚರಂಡಿಯ ವ್ಯವಸ್ಥೆಯನ್ನು ತತ್‌ಕ್ಷಣದಲ್ಲಿ ಸರಿಪಡಿಸತಕ್ಕಂಥ ತಾತ್ಕಾಲಿಕವಾದಂಥ ಕೆಲಸವನ್ನು ಮಾಡಬೇಕಾಗಿದೆ ಮತ್ತು ಶಾಶ್ವತವಾಗಿರತಕ್ಕಂಥ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಮುಂದಾದರೆ ಮೈಸೂರು ನಗರದ ಪ್ರಜೆಗಳಿಗೆ ರಕ್ಷಣೆ ಸಿಗುತ್ತದೆ. ಇಲ್ಲದಿದ್ದರೆ ವರ್ಷೇ ವರ್ಷೇ ನೂರಾರು ಜನ ಸಾಯುತ್ತಿರುತ್ತಾರೆ. ದಯವಿಟ್ಟು ಅದಕ್ಕೆ ಅವಕಾಶವನ್ನು ಕೊಡಬೇಡಿ ಎಂದು ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ರಾಜುಗೌಡ:– ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ಕಲುಷಿತ ನೀರು ಸರಬರಾಜು ಮಾಡಿರುವುದರಿಂದ ಈ ಕರುಳುಬೇನೆ ಬಂದಿರತಕ್ಕಂಥದ್ದು ಇವತ್ತಿನ ದಿವಸ ವ್ಯಕ್ತವಾಗಿದೆ. ಮೈಸೂರು ಜಲಮಂಡಲಿಯ ನೌಕರರು ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಪಾಲಿಸಿಲ್ಲ. ನೀರು ಸಂಗ್ರಹ ಮಾಡತಕ್ಕಂಥ ಕಾರ್ಯಾಗಾರದಲ್ಲಿ ಕಲುಷಿತ ನೀರು ಉತ್ಪಾದನೆಯಾಗಿದೆ ಎನ್ನುವುದು ಪರೀಕ್ಷೆಯಿಂದ ದೃಢಪಟ್ಟಿದೆ. ನಮ್ಮ ಆರೋಗ್ಯ ನಿರ್ದೇಶಕರು ಹೋಗಿ ನೀರನ್ನು ತೆಗೆದು ಪರೀಕ್ಷೆ ಮಾಡಿದಾಗ ಅಲ್ಲಿ ಬ್ಯಾಕ್ಟೀರಿಯಾ ಅಣುಗಳಿರತಕ್ಕಂಥದ್ದು ವ್ಯಕ್ತವಾಗಿದೆ. ನೀರು ಕೆಟ್ಟಿದ್ದರೂ ಸಹಿತ, ಕಲುಷಿತ ನೀರು ಇದ್ದರೂ ಸಹಿತ ಅದನ್ನು ಮುಚ್ಚಿಟ್ಟಿರುತ್ತಾರೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳನ್ನು ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ಸ್ವಾಮಿ, ಅವರು ಕರ್ತವ್ಯಚ್ಯುತಿ ಮಾಡಿದ್ದಾರೆ. ಅವರು ನೀರು ಕಲುಷಿತವಾಗಿದೆ ಎಂದು ಕಂಡಿದ್ದರೂ ಅಂಥ ನೀರನ್ನು ಸರಬರಾಜು ಮಾಡಿದ್ದರಿಂದ ಇವತ್ತಿನ ದಿವಸ ಮೈಸೂರು ನಗರದಲ್ಲಿ ಸುಮಾರು 70 ಜನ ಸತ್ತು ಹೋಗಿದ್ದಾರೆ. ನೂರಾರು ಜನ ಒಳರೋಗಿಗಳಾಗಿ

ಆಸ್ಪತ್ರೆಗೆ ದಾಖಲಾಗಿದ್ದಾರೆ. ಸ್ವಾಮಿ, ನಂಜನಗೂಡಿನಿಂದ ಬರುತ್ತಿದ್ದಂಥ ಜನರೂ ಸಹಿತ ಮೈಸೂರಿನಲ್ಲಿ ಕಲುಷಿತ ನೀರನ್ನು ಕುಡಿದು ಅವರು ಸಹ ಸುಮಾರು 20-30 ಜನ ಸತ್ತಿದ್ದಾರೆ. ದಯವಿಟ್ಟು ಜಲಮಂಡಳಿಯ ನೌಕರರನ್ನು ತಾವು ಅಮಾನತ್ತಿನಲ್ಲಿ ಇಡಬೇಕು. ಅಮಾನತ್ತಿನಲ್ಲಿಟ್ಟು ಮತ್ತೆ ಅವರನ್ನು ತನಿಖೆಗೆ ಒಳಪಡಿಸಿ, ಮುಂದೆ ಯಾರೂ ಕೂಡ ಇಂಥ ಕೆಲಸವನ್ನು ಮಾಡದಿರುವಂತೆ ಮಾಡಬೇಕು. ಅವರು ಕರ್ತವ್ಯ ವಿಮುಖರಾದುದರಿಂದ ಮೈಸೂರಿನಲ್ಲಿ ಸುಮಾರು 70 ಜನ ಸಾಯಲು ಕಾರಣವಾಯಿತು. ಅಲ್ಲಿ ಕಲುಷಿತವಾದ ನೀರನ್ನು ಪರೀಕ್ಷೆ ಮಾಡಿದ್ದಾರೆ, ಅದರಲ್ಲಿ ಬ್ಯಾಕ್ಟೀರಿಯ ಕಾಣಿಸಿದೆ ಎಂದು ದೃಢಪಟ್ಟಿದೆ. ಆದ್ದರಿಂದ ದಯವಿಟ್ಟು ಆ ನೌಕರರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದಿರುವುದರಿಂದ ಅವರನ್ನು ಕೂಡಲೇ ಅಮಾನತ್ತಿನಲ್ಲಿ ಇಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಬಿನ್ನವಿಸಿಕೊಳ್ಳುತ್ತೇನೆ.

3. ಭರಮಸಾಗರ ಮತ್ತು ಸುತ್ತಮುತ್ತ ಹಳ್ಳಿಗಳಲ್ಲಿ ಕಾಲರಾ ರೋಗ ಹರಡುತ್ತಿರುವುದು

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಅಧ್ಯಕ್ಷರೇ ಭರಮಸಾಗರ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಇತ್ತೀಚಿನ 3-4 ದಿವಸಗಳಲ್ಲಿ 10 ಜನರು ಸತ್ತು ಹೋಗಿದ್ದಾರೆ. ನಾನು ಆರೋಗ್ಯ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕ ಮಾಡಿದಾಗ ಅವರು ಹೇಳುತ್ತಿದ್ದಾರೆ, ಇದು ನೀರಿನಿಂದ ಬಂದಿದೆಯೋ ಅಥವಾ ನಿಜವಾಗಿ ಕಾಲರಾನೋ ಅಥವಾ ಬೇರೆ ರೀತಿ ಅಂದರೆ ಆಹಾರದ ಮೂಲಕ ಇದು ಬಂದಿದೆಯೋ ಎನ್ನುವ ಬಗ್ಗೆ ನಿಖರವಾಗಿ ಅವರು ತೀರ್ಮಾನಕ್ಕೆ ಬಂದಿಲ್ಲ. ಹೀಗಾಗಿ ಜನರು ಸತತವಾಗಿ ಭರಮಸಾಗರ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ. ನೂರು ಜನರಿಗೆ ಹಾಸಿಗೆ ಇಲ್ಲದೆ ನೆಲದ ಮೇಲೆ ಮಲಗಿದ್ದಾರೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಕಛೇರಿಗೆ ತಿಳಿಸಿದ್ದೇನೆ. ಚೀಫ್ ಸೆಕ್ರೆಟರಿಯವರಿಗೂ ತಿಳಿಸಿದ್ದೇನೆ. ತಕ್ಷಣ ತಾವು ಮೆಡಿಸನ್ಸ್ ಕಳುಹಿಸಬೇಕು ಮತ್ತು ಅಲ್ಲಿ ಆಂಬ್ಯುಲೆನ್ಸ್ ಇಲ್ಲ. ರೋಗಿಗಳನ್ನು ಚಿತ್ರದುರ್ಗ ಆಸ್ಪತ್ರೆಗಾಗಲಿ ಅಥವಾ ದಾವಣಗೆರೆ ಆಸ್ಪತ್ರೆಗಾಗಲಿ ಶಿಫ್ಟ್ ಮಾಡತಕ್ಕಂಥಾದ್ದಕ್ಕೆ ಅಲ್ಲಿ ಯಾವ ಸೌಕರ್ಯವೂ ಇಲ್ಲ. ಇಂಥ ಪರಿಸ್ಥಿತಿ ಅಲ್ಲಿದೆ. ಇತ್ತೀಚಿಗೆ ನಮಗೆ ಬಂದಿರತಕ್ಕಂಥ ಸುದ್ದಿಯ ಪ್ರಕಾರ, ಪತ್ರಿಕೆಗಳಲ್ಲಿ ಬಂದಿರುವ ಪ್ರಕಾರ ಹೊಳಲ್ಕೆರೆ, ಚಿಳ್ಳಕೆರೆ, ನಾಯಕನಹಟ್ಟಿ ಜಾತ್ರೆಯಾದ ಮೇಲೆ ಕೆಲವು ಜನರು ಸತ್ತುಹೋಗಿದ್ದಾರೆ ಎಂದು. ಇದು ಯಾವ ರೀತಿ ಆಯಿತು, ಏನು ನೀರಿನಿಂದ ಆಗಿದೆಯೋ ಅಥವಾ ಇದು ಕಾಲರಾನೋ ಅಥವಾ ಬೇರೆ ಫುಡ್ ಮೂಲಕ ಬಂದಿದೆಯೋ ಎನ್ನುವುದನ್ನು ಕಂಡುಹಿಡಿಯಲು ಒಂದು ಟೀಮ್ ಆಫ್ ಡಾಕ್ಟರ್ಸನ್ನು, ಎಕ್ಸ್‌ಪರ್ಟ್ ಡಾಕ್ಟರ್ಸನ್ನು ದಯವಿಟ್ಟು ಅಲ್ಲಿಗೆ ಕಳುಹಿಸಿಕೊಡಬೇಕು ಮತ್ತು ಅಲ್ಲಿ ಮೆಡಿಸನ್‌ಗಳನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಯಾರು ಜನರು ಚಕ್ಕಡಿಯಲ್ಲಿ ಬರುತ್ತಿದ್ದರು ಅವರು ಮಧ್ಯದಲ್ಲಿಯೇ ಅಸು ನೀಗಿದ್ದಾರೆ. ಇಂಥ ಪರಿಸ್ಥಿತಿ ಇದೆ. ದಯವಿಟ್ಟು ಇದರ ಬಗ್ಗೆ ಸರ್ಕಾರದವರು ಗಮನಹರಿಸಿ ತಕ್ಷಣ ಮೆಡಿಸನ್, ಎಕ್ವಿಪ್‌ಮೆಂಟ್ಸ್ ಮತ್ತು ಎಕ್ಸ್‌ಪರ್ಟ್ಸ್ ಸ್ಟಾಫನ್ನು ಕಳುಹಿಸಿಕೊಡಬೇಕು, ಮತ್ತು ಅದನ್ನು ತಡೆಗಟ್ಟಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಅಧ್ಯಕ್ಷರೇ, ವಿವರವಾದಂಥ ಒಂದು ಹೇಳಿಕೆಯನ್ನು ನಾನು ಇವತ್ತು ಮಧ್ಯಾಹ್ನದ ಹನ್ನೆರಡೂವರೆ ಗಂಟೆ ಒಳಗಡೆ ಮಾಡುತ್ತೇನೆ.